ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

4. ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಮಾನ್ಯ ಸಚಿವರು ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಈ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ಬ್ಯಾಕ್‌ಗ್ರೌಂಡ್– ಅನ್ನಾದರೂ ಹೇಳಿ, ಯಾರು, ಏನು ಮಾಡುತ್ತಿದ್ದಾರೆ ಎನ್ನುವುದನ್ನಾದರೂ ಹೇಳಿ. ಒಂದು ಬಿಲ್‌ಅನ್ನು ಸದನದಲ್ಲಿ ತಂದಾಗ ಅದಕ್ಕೆ objects and reasons ಇರುತ್ತದೆ. ಇದು ಹೊಸದಾಗಿ ತಂದಿರುವುದರಿಂದ ಇದರ ಬ್ಯಾಕ್‌ಗ್ರೌಂಡ್ ಹೇಳಬೇಕು. ಈಗ ನ್ಯೂ ಬಾಲ್ಡ್‌ವಿನ್ ವಿಶ್ವವಿದ್ಯಾಲಯ ವಿಧೇಯಕಕ್ಕೆ ಒಪ್ಪಿಗೆ ಕೊಟ್ಟೆವು. ಇಲ್ಲಿ ಸತ್ಯನಾರಾಯಣ ಎಜುಕೇಷನ್ ಟ್ರಸ್ಟ್ ಎಂದು ಇದೆ. ಸತ್ಯನಾರಾಯಣನಿಗೂ ನಮಗೆ ಬಾಲ್ಡ್‌ವಿನ್‌ಗೂ ಹೇಗೆ ಸಂಬಂಧ ಎನ್ನುವುದು ಅರ್ಥವಾಗಲಿಲ್ಲ. ಒಬ್ಬರಿಗೊಬ್ಬರಿಗೆ ಸಂಬಂಧ ಹೇಗಿದೆ ಎನ್ನುವುದನ್ನು ಸ್ವಲ್ಪ ಹೇಳಿ. ಪ್ರೆಸಿಡೆನ್ಸಿ ಎಂದರೆ ಯಾರು, ಏನು ಕತೆ ಎನ್ನುವುದನ್ನು ಹೇಳಿ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): A.H.Memorial Education Trust ಎನ್ನುವುದಿದ್ದು ನಿಸಾರ್ ಅಹಮದ್ ಎನ್ನುವವರು ಈ ಟ್ರಸ್ಟಿನ ಅಧ್ಯಕ್ಷರಾಗಿದ್ದಾರೆ. 52 ಎಕರೆ 16 ಗುಂಟೆ ಜಾಗದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ಇಟಗಾಲಪುರದಲ್ಲಿ ಈ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸುವಂಥ ಉದ್ದೇಶವನ್ನು ಹೊಂದಿದ್ದಾರೆ. ಕಳೆದ 28 ವರ್ಷಗಳ ಹಿಂದೆ ಈ ಸಂಸ್ಥೆ ಪ್ರಾರಂಭವಾಗಿದೆ. 15 ಸಾವಿರ ಜನ

ವಿದ್ಯಾರ್ಥಿ–ವಿದ್ಯಾರ್ಥಿನಿಯರು ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎನ್ನುವ ಮಾಹಿತಿಯನ್ನು Local Inspection Committee Report ಕೊಟ್ಟಿದೆ. ರಾಜ್ಯದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಇದೂ ಕೂಡ ಒಂದು. ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಉತ್ತಮ ಹೆಸರನ್ನು ಈ ಪ್ರೆಸಿಡೆನ್ಸಿ ವಿದ್ಯಾಸಂಸ್ಥೆ ಪಡೆದುಕೊಂಡಿದೆ.

ಶ್ರೀ ನೆ.ಲ.ನರೇಂದ್ರಬಾಬು: ಬೆಂಗಳೂರಿನಲ್ಲಿ ಅಥವಾ ಬೆಂಗಳೂರು ಸುತ್ತಮುತ್ತ ಈ ಸಂಸ್ಥೆಯ ಶಾಲಾಕಾಲೇಜುಗಳು ಎಲ್ಲೆಲ್ಲಿ ರನ್ ಆಗುತ್ತಿವೆ ಎನ್ನುವ ಬಗ್ಗೆ ಒಂದು ಲಿಸ್ಟ್ ಕೊಡಿ.

ಶ್ರೀ ಸಿ.ಟಿ.ರವಿ: ಪ್ರೆಸಿಡೆನ್ಸಿ ಯೂನಿವರ್ಸಿಟಿಯ ಬಗ್ಗೆ ಒಂದು ದೊಡ್ಡ ರಿಪೋರ್ಟನ್ನೇ ಕೊಟ್ಟಿದ್ದಾರೆ. ನಿನ್ನೆ ನಾನು ಕಾಲೇಜುಗಳ ಲಿಸ್ಟನ್ನೆಲ್ಲ ಕೌನ್ಸಿಲ್‌ನಲ್ಲಿ ಹೇಳಿದೆ. ಈಗ ಆ ಫೈಲ್ ಸಿಗುತ್ತಿಲ್ಲ. ಇದುವರೆಗೆ ಅವರು ಹೇಳಿರುವುದು ಮತ್ತು Local Inspection Committee Report ಪ್ರಕಾರ ಇದು 28 ವರ್ಷಗಳ ಹಿಂದೆ ಪ್ರಾರಂಭವಾಗಿದೆ. 10 ವರ್ಷಗಳಿಂದ ಪದವಿ ಕಾಲೇಜನ್ನು ನಡೆಸುತ್ತಿದೆ. 15 ಸಾವಿರ ಜನ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಟಾಪ್ ರಿಸಲ್ಟ್ ಇರುವಂಥ, ಕ್ಯಾಂಪಸ್ ಸೆಲೆಕ್ಷನ್ ಆಗುತ್ತಿರುವಂಥ ವಿದ್ಯಾಸಂಸ್ಥೆಗಳಲ್ಲಿ ಇದೂ ಒಂದು. ಇದರ ಕಾಲೇಜುಗಳು ಎಲ್ಲೆಲ್ಲಿವೆ ಎನ್ನುವ ಮಾಹಿತಿಯಿರುವ ಪಟ್ಟಿಯನ್ನು ಒದಗಿಸಿದ್ದಾರೆ, ನಿನ್ನೆ ನಾನು ಕೌನ್ಸಿಲ್‌ನಲ್ಲಿ ಅದರ ವಿವರಗಳನ್ನು ಹೇಳಿದ್ದೆ.

ಶ್ರೀ ನೆ.ಲ.ನರೇಂದ್ರಬಾಬು: ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇನೆ, ಪ್ರೆಸಿಡೆನ್ಸಿ ಸ್ಕೂಲ್ ಎಂದು ನನ್ನ ಕ್ಷೇತ್ರದಲ್ಲಿದೆ. ಇವರು 15,000 ವಿದ್ಯಾರ್ಥಿ–ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಹೇಳಿದರು, ಇದರಲ್ಲಿ ಸ್ಕೂಲುಗಳ ಮಕ್ಕಳನ್ನು ಸೇರಿಸಿ ಹೇಳುತ್ತಿದ್ದಾರೋ ಅಥವಾ ಕಾಲೇಜಿನಲ್ಲಿ ಓದುತ್ತಿರುವವರು ಮಾತ್ರ 15,000ವೇ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಸಿ.ಟಿ.ರವಿ: ಎಲ್.ಕೆ.ಜಿ.ಯಿಂದ ಓದುತ್ತಿರುವವರೆಲ್ಲರನ್ನೂ ಸೇರಿಸಿ ಅಂಕಿಅಂಶ ಕೊಡುತ್ತಿದ್ದೇನೆ. ಈ ಸಂಸ್ಥೆಯವರು 10 ವರ್ಷಗಳಿಂದ ಪದವಿ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆ ಪಿಹೆಚ್.ಡಿ. ಕೋರ್ಸ್, ಪಿ.ಜಿ. ಕೋರ್ಸನ್ನೂ ಕೂಡ ನಡೆಸುತ್ತಿದೆ. Local Inspection Committee Report ಇವೆಲ್ಲವನ್ನೂ ಒಳಗೊಂಡಿದೆ. ನಾವು ಒಂದು ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಟ್ಟ ತಕ್ಷಣ, ಅವರು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುವುದಕ್ಕೆ ಬರುವುದಿಲ್ಲ. ಅವರು ಯು.ಜಿ.ಸಿ ಗೈಡ್‌ಲೈನ್ಸ್‌ನ್ನು ಫಾಲೋ ಮಾಡಲೇಬೇಕು,

ಯು.ಜಿ.ಸಿ. ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲೇಬೇಕು, ಫಾಲೋ ಮಾಡಲೇಬೇಕು, Act ಒಳಗೆ ಅದನ್ನು ತಂದಿದ್ದೇವೆ. ಇಂಜಿನೀಯರಿಂಗ್ ಕಾಲೇಜು ಪ್ರಾರಂಭ ಮಾಡಬೇಕೆಂದರೆ, A.I.C.T.E. ಯ ಅನುಮತಿಯನ್ನು ಪಡೆಯಬೇಕು ಮತ್ತು A.I.C.T.E. ಯ ನಿಯಮಗಳನ್ನು ಪಾಲಿಸಲೇಬೇಕು. ಹಾಗೆಯೇ, Medical College ಮಾಡಬೇಕೆಂದರೆ M.C.I. ನಿಯಮಗಳನ್ನು ಅಳವಡಿಸಿಕೊಳ್ಳಬೇಕು ಮತ್ತು ಅವರ ಅನುಮತಿಯನ್ನು ಪಡೆಯಬೇಕು.

ಶ್ರೀ ನೆ.ಲ.ನರೇಂದ್ರಬಾಬು: ವರದಿ ಕೊಟ್ಟಿರುವುದು ಯಾವ Local Inspection Committee.?

ಶ್ರೀ ಸಿ.ಟಿ.ರವಿ: Higher Education Counsil ನಲ್ಲಿರುವ ಮೂರು ಅಥವಾ 5 ಜನ ರಿಟೈರ್ಡ್ ವೈಸ್ ಚಾನ್ಸಲರ್‌ಗಳ ನೇತೃತ್ವದ ಕಮಿಟಿ ಈ ವರದಿಯನ್ನು ಕೊಟ್ಟಿದೆ.

ಶ್ರೀ ನೆ.ಲ.ನರೇಂದ್ರಬಾಬು: ಅವರಿಗೆ ಯೂನಿವರ್ಸಿಟಿ ಮಂಜೂರು ಮಾಡಿಕೊಡುವುದಕ್ಕೆ ಅವರು 10 ವರ್ಷಗಳಿಂದ ಪದವಿ ಕಾಲೇಜನ್ನು ನಡೆಸುತ್ತಿದ್ದಾರೆ ಎಂದು ಹೇಳುತ್ತಾರೆ.

ಶ್ರೀ ಸಿ.ಟಿ.ರವಿ: ಪ್ರೆಸಿಡೆನ್ಸಿ ಸ್ಕೂಲು, ನಂದಿನಿ ಲೇಔಟ್, ಬೆಂಗಳೂರು, ಪ್ರೆಸಿಡೆನ್ಸಿ ಸ್ಕೂಲು, ಹೆಚ್.ಎಂ.ಟಿ. ಲೇಔಟ್, ಆರ್.ಟಿ.ನಗರ, ಸೇಂಟ್ ಪಾಲ್ ಇಂಗ್ಲೀಷ್ ಸ್ಕೂಲು, ಜೆ.ಪಿ.ನಗರ, ಪ್ರೆಸಿಡೆನ್ಸಿ ಸ್ಕೂಲು, ಬಿಳೇಕಹಳ್ಳಿ, ಪ್ರೆಸಿಡೆನ್ಸಿ ಸ್ಕೂಲು, ಕಿಲಾರೆ, ಮಂಗಳೂರು, ಪ್ರೆಸಿಡೆನ್ಸಿ ಸ್ಕೂಲು, ಕಸ್ತೂರಿ ನಗರ, ಎನ್.ಜಿ.ಇ.ಎಫ್. ಲೇಔಟ್, ಬೆಂಗಳೂರು, ಪ್ರೆಸಿಡೆನ್ಸಿ ಸ್ಕೂಲು, ಆವಲಹಳ್ಳಿ, ಪ್ರೆಸಿಡೆನ್ಸಿ ಜೂನಿಯರ್ ಕಾಲೇಜು, ಜೆ.ಪಿ.ನಗರ, ಪ್ರೆಸಿಡೆನ್ಸಿ ಕಾಲೇಜು, ಕೆಂಪಾಪುರ, ಹೆಬ್ಬಾಳ, ಪ್ರೆಸಿಡೆನ್ಸಿ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್. ಮಾನ್ಯ ಅಧ್ಯಕ್ಷರೆ, ಎಲ್ಲಾ details ಈ File ನೊಳಗೆ ಇದೆ.

ಶ್ರೀ ನೆ.ಲ.ನರೇಂದ್ರಬಾಬು: ನಾನು ವಿರೋಧ ಮಾಡುತ್ತಿಲ್ಲ. Primary school, High school ಎಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು: ಕಾಲೇಜು ಎಂದು ಹೇಳಿದ್ದಾರಲ್ಲ?

ಶ್ರೀ ಸಿ.ಟಿ.ರವಿ: ನನ್ನ ಹತ್ತಿರ ಎಲ್ಲ ಮಾಹಿತಿ ಇದೆ. ಅವರಿಗೆ ಬೇಕಾದ ಮಾಹಿತಿಯನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು: Primary school, High school ಗೂ ವಿಶ್ವವಿದ್ಯಾಲಯಕ್ಕೂ ಏನು ಸಂಬಂಧ ಇದೆ? ತಾವು ಏಕೆ ಹೀಗೆ ಆಗಿಬಿಟ್ಟಿರಿ? ಆ ಸಂಸ್ಥೆ ಆರಂಭವಾದಾಗಿನಿಂದ ನನಗೂ ಗೊತ್ತಿದೆ. St. Marks ರಾಜಾಜಿನಗರ

6ನೇ ಬ್ಲಾಕ್‌ನಲ್ಲಿದೆ, ಇದು ಮಾನ್ಯ ಸುರೇಶ್ ಕುಮಾರ್‌ರವರಿಗೂ ಗೊತ್ತಿದೆ. Nandini Layout ನಲ್ಲಿ Presidency school ಇದೆ. ನಾನು ಹೇಳುವುದೇನೆಂದರೆ, 2–2 ವರ್ಷಗಳಿಂದ, 3–3 ವರ್ಷಗಳಿಂದ degree college ಗಳನ್ನು ಪ್ರಾರಂಭ ಮಾಡಿದವರಿಗೆ University ಕೊಡುತ್ತಾರೆ, ಅವರು ಜಮೀನು ತೆಗೆದುಕೊಳ್ಳುತ್ತಾರೆಂದರೆ, ಬಹುಶಃ ಡಾ: ಮಹದೇವಪ್ಪನವರು ಹೇಳಿದ ಹಾಗೆ ಎಲ್ಲೋ ಒಂದು ಕಡೆ Global Investors' Meet ನಲ್ಲಿ ಮಾಡಿದ ಹಾಗೆ ಆಗುತ್ತಿದೆ. Land ಗೋಸ್ಕರ, ಜಮೀನಿಗೋಸ್ಕರ, ಒಂದು licence ಗೋಸ್ಕರ, ದಯವಿಟ್ಟು ತರಾತುರಿಯಲ್ಲಿ ಬೇಡ, ನಿಮ್ಮ ಉತ್ಸಾಹ o.k. ಆದರೆ, ನೀವು ಈ ರೀತಿಯಾಗಿ 2 ವರ್ಷಕ್ಕೆ, 3 ವರ್ಷಕ್ಕೆಲ್ಲ 2 ಕಾಲೇಜು, 3 ಕಾಲೇಜು ಕೊಡುವುದು ಸರಿಯಲ್ಲ.

ಸಿ.ಟಿ.ರವಿ: ನಾನು ಈಗ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದೇನೆ. ಅವರಿಗೆ ಸಮಾಧಾನವಾಗುವಷ್ಟು ತೃಪ್ತಿಕರವಾಗುವಷ್ಟು ವಿವರಣೆ ಕೊಟ್ಟಿದ್ದೇನೆ. ಅದಕ್ಕಿಂತ ತೃಪ್ತಿಯಾಗದಿದ್ದರೆ ನಾನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟು ಸಾಧ್ಯವೋ ಅಷ್ಟು convince ಮಾಡುವ ಪ್ರಯತ್ನ ಮಾಡಿದ್ದೇನೆ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, University ಕೊಟ್ಟ ತಕ್ಷಣ. . .

ಶ್ರೀ ಟಿ.ಬಿ. ಜಯಚಂದ್ರ : ಖಾಸಗಿ University ಗಳು ಬರಬೇಕು, human resources ಗೆ ಹೆಚ್ಚು help ಆಗಬೇಕು ಎನ್ನುವ ತತ್ವದಲ್ಲೇ ಇರತಕ್ಕಂಥವರು. ನಾವು ಅದರ ಬಗ್ಗೆ ವಿರೋಧ ಎಂದಲ್ಲ. ನಾವು ಏಕೆ ಇವೆಲ್ಲ suggestion ಕೊಡುತ್ತೇವೆಂದರೆ, ಸ್ವಲ್ಪ ಮುನ್ನೆಚ್ಚರಿಕೆ ಇರಲಿ ಎನ್ನುವ ದೃಷ್ಟಿಯಿಂದ. ಈಗ ನಮ್ಮ ದೇಶದಿಂದ ಬೇರೆ ಬೇರೆ ದೇಶದ University ಗಳಿಗೆ ಮಕ್ಕಳು ಹೋಗುತ್ತಾರೆ. ಹಾಗೆಂದು ನಮ್ಮ ಮಕ್ಕಳನ್ನು ಬೇರೆ University ಗೆ ತೆಗೆದುಕೊಂಡುಹೋಗತಕ್ಕಂಥ ಒಂದು ದೊಡ್ಡ ದಂಧೆಯೇ ಇರುತ್ತದೆ Foreign University admission ಗೆಂದೇ ಒಂದು ದೊಡ್ಡ ದಂಧೆ ಇರುತ್ತದೆ. ಒಬ್ಬ student Australia ಗೋ, America ಗೋ ಅಥವಾ England ಗೋ ಹೋಗಿ ಬೇರೆ ಯಾವುದಾದರೂ course ಮಾಡಬೇಕೆಂದರೆ ಲಕ್ಷಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ, ಅದಕ್ಕೆ bank support ಸಿಗುತ್ತದೆ. ಹಾಗಾಗಿ ಬಹಳಷ್ಟು ಜನ ಮಕ್ಕಳು foriegn ಗೆ ಹೋಗತಕ್ಕಂಥ ಸಂದರ್ಭಗಳು ಇವೆ. ಈಗ ನಾನು ಒಂದು ಮಾತನ್ನು ಮಾನ್ಯ ರವಿಯವರಿಗೆ ಕೇಳಬಯಸುತ್ತೇನೆ. ನೀವು ಇಷ್ಟೊಂದು University ಗಳನ್ನು

ಮಾಡುತ್ತಿದ್ದೀರಲ್ಲಾ, Foreigners ಯಾರಾದರೂ ನಿಮ್ಮ University ಗಳಿಗೆ ಬರುತ್ತಿದ್ದಾರೆಯೇ? Foreigners ಯಾರಾದರೂ ಬಂದು ನಿಮ್ಮ University ಗಳಿಗೆ admission ಆಗುತ್ತಿದ್ದಾರೆಯೇ? ಇನ್ನೊಂದು ವಿಚಾರ ಏನೆಂದರೆ, University ಯಲ್ಲಿ Doctorate ಕೊಡುತ್ತಾರೆ. University ಯಲ್ಲಿ Doctorate ಕೊಡುವ ಸಂದರ್ಭದಲ್ಲಿ,– ಸುರೇಶ್ ಕುಮಾರ್‌ರವರು ಇದ್ದಾಗ ನಾನು ಎಷ್ಟೋ ಸಾರಿ ಹೇಳುತ್ತಿದ್ದೆ– University ಯವರು ಅವರವರ academic ಗೆ qualification ಗೆ ಸೀಮಿತವಾಗಿ Doctorate ಅನ್ನು ಕೊಡಬೇಕೆಂದು ಹೇಳಿ ಎಂದು ಹೇಳುತ್ತಿದ್ದೆ. ಏಕೆಂದರೆ, ಈಗ Foreign University ಗಳು ಹೇಗೆ ಆಗಿವೆಯೆಂದರೆ, ಅಂದರೆ ನಮ್ಮದು ಹಾಗೆ ಆಗಬಾರದು ಎಂದು ಹೇಳುತ್ತಿದ್ದೇನೆ. ಈಗ ಯಡಿಯೂರಪ್ಪನವರಿಗೂ ಒಂದು Doctorate ಕೊಟ್ಟುಬಿಟ್ಟರು. ಅದು ಆದಮೇಲೆ criminal records ಇರುವಂಥವರೊಬ್ಬರಿಗೆ ಡಾಕ್ಟರೇಟ್ ಕೊಟ್ಟುಬಿಟ್ಟರು. ನಾನು ಮೊನ್ನೆ ಯಾವುದೋ ಒಂದು ಕಛೇರಿ ಹತ್ತಿರ ನಿಂತಿದ್ದಾಗ ಯಾರೋ ಒಬ್ಬ ಪುಣ್ಯಾತ್ಮ ನನ್ನ ಹತ್ತಿರ ಬಂದು ಯಾರಿಗೂ disclose ಮಾಡಬಾರದೆಂದು ಕೇಳಿ, ಸರ್, ನನಗೊಂದು Ph.D., Degree ಬಂದಿದೆ ಎಂದು ಹೇಳಿದ. ಯಾರಪ್ಪ ಎಂದು ನೋಡಿದರೆ, I will tell you, he has not even passed SSLC, ಅವನಿಗೂ Doctor of Literature ಎಂದು ಕೊಟ್ಟಿದ್ದಾರೆ. ದಯಮಾಡಿ ಹಾದಿಬೀದಿಯಲ್ಲಿ Ph.D. ಕೊಡುವಂಥದ್ದು ಆಗಬಾರದು. ಇದರ ಮೇಲಾದರೂ ನಿಮ್ಮ ಲಗಾಮು ಇಲ್ಲವೆನ್ನುವುದಾದರೆ ಇನ್ನು ಸಿನಿಮಾದಲ್ಲಿ ಆಕ್ಟ್ ಮಾಡುವವರೆಲ್ಲರೂ ಡಾಕ್ಟರುಗಳು ಆಗಿ ಹೋಗಿಬಿಡುತ್ತಾರೆ, ಎಲ್ಲರೂ Ph.D. ಗಳು ಆಗಿಬಿಡುತ್ತಾರೆ. ಬಹಳ ಸುಲಭವಾಗಿ ಪ್ರಚಾರ ಸಿಗುತ್ತದೆ ಎನ್ನುವ ಕಾರಣಕ್ಕೋಸ್ಕರ University ಮಾಡುತ್ತಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, University ಯವರು Ph.D. ಕೊಡಬೇಕೆನ್ನುವಂಥ ಸಂದರ್ಭದಲ್ಲಿ, ಮೊನ್ನೆ ಯಾವುದೋ ಒಂದು University ಯಲ್ಲಿ ಎಲ್ಲಾ ರಾಜಕಾರಣಿಗಳೂ, ಸಿನಿಮಾದವರಿಗೂ Ph.D. ಕೊಡಬೇಕೆಂದು ನಿರ್ಣಯ ಮಾಡಿದ್ದಾರೆಂದು ಕೇಳಿದ್ದೆ. ನನಗೆ ಇದನ್ನು ನೋಡಿ ಭಯ ಆಗುತ್ತದೆ. ಇನ್ನು ನಾವೆಲ್ಲರೂ ಅರ್ಹರಾಗಿಬಿಡುತ್ತೇವೆ. ಇನ್ನು ನಾವು ಡಾಕ್ಟರ್ ಎಂದು ಹಾಕಿಕೊಳ್ಳಬಹುದು, Ph.D. ಏನೂ ಮಾಡಬೇಕಾಗಿಲ್ಲ! University ಹತ್ತಿರವಾಗಿತ್ತು ಎಂದರೆ ಎಲ್ಲರಿಗೂ Ph.D. ಸಿಗುವಂಥ ಸಂದರ್ಭ ಬರುತ್ತದೆ

ದಯಮಾಡಿ ಅದರ ಮೇಲೆ ಲಗಾಮು ಇರಬೇಕು. ಯಾವುದೇ ರೀತಿಯಲ್ಲೂ ಕೂಡ Ph.D. ಗೌರವ ಕೊಡಬೇಕಾದಾಗ University ಇರಲಿ, ಸರ್ಕಾರದ ಒಪ್ಪಿಗೆ ಇಲ್ಲದೆ ಕೊಡಬಾರದು. ಅದನ್ನು ಜನರು ಅಪಹಾಸ್ಯ ಮಾಡಬಾರದು. ಈಗಾಗಲೇ ನಾನು ಹೇಳಿದ ಹಾಗೆ, ಯಾರೋ ಒಬ್ಬ SSLC pass ಮಾಡಿಲ್ಲದೇ ಇರತಕ್ಕಂಥ ಒಬ್ಬ American University ಯ Ph.D. ಯನ್ನು ತೆಗೆದುಕೊಳ್ಳುತ್ತಾನೆಂದರೆ ಹಾದಿಬೀದಿಯಲ್ಲಿ ಜನರು ನಗಬಾರದು. ಆ ರೀತಿಯಾಗಿ ಎಚ್ಚರಿಕೆಯನ್ನು ವಹಿಸಬೇಕೆಂಬುದೇ ನನ್ನ ಮನವಿಯಾಗಿದೆ. ಈಗ ಮಾನ್ಯ ಅರವಿಂದರವರು ಇದ್ದಾಗ WIPRO ಆಯಿತು. I am proud to say WIPRO University ಮಾಡಬೇಕಾದಾಗ ನಾವು ಬಹಳ ಚರ್ಚೆ ಮಾಡಿದೆವು. ಆದರೆ, ಅಜೀಂ ಪ್ರೇಮ್‌ಜಿಯವರು he has transferred four thousand crores of rupees. 4000 ಕೋಟಿ ರೂಪಾಯಿಗಳನ್ನು Higher Education ಗೆ ಎಂದು ಇಟ್ಟಿದ್ದನ್ನು ನೋಡಿದಾಗ ಬಹಳ ಸಂತೋಷವಾಯಿತು. Yes, ನಾವು ಏನೇ ಚರ್ಚೆ ಮಾಡಲಿ, ಇಂಥ Universities ಬರಬೇಕೆಂದು then I decided. ಪ್ರೇಮ್‌ಜಿಯವರಂಥವರು ಮಾಡಿದರೆ ನಾವು ಒಪ್ಪೋಣ. ಅವರ Courses ಗೆ, ಅವರ research ಗೆ, Development ಗೆ, ಕೊಡತಕ್ಕಂಥ ರೀತಿಯಲ್ಲಿ ಮಾಡಬೇಕು. ಅದನ್ನು ಒಪ್ಪೋಣ. ಅದನ್ನೇ ಮಾನದಂಡವಾಗಿ ಇಟ್ಟುಕೊಂಡು ನಾವು ಎಲ್ಲರಿಗೂ ಕೊಡುತ್ತಾ ಹೋಯಿತು ಎಂದರೆ what is their background? What is their capacity? ಅವರ ಚರಿತ್ರೆ ಏನು ಎನ್ನುವುದು ಬಹಳ ಮುಖ್ಯ ಆಗುತ್ತದೆ. ಆದರೆ, ಎಲ್ಲೋ ಒಂದು ಕಡೆಗೆ University ಗಳನ್ನು ಕೊಡುತ್ತಿದ್ದೇವೆ, ಈಗಾಗಲೇ, 10–15 University ಗಳನ್ನು ಕೊಟ್ಟಾಯಿತು. ಇನ್ನೊಂದು ದಿವಸ ನಾವು ಕೇಳಬೇಕಾಗುತ್ತದೆ. ಸರ್ಕಾರ ನೀವಿರಲಿ, ಇನ್ನೊಬ್ಬರು ಇರಲಿ, ನಮಗೆ ಎಲ್ಲೋ ಒಂದು ಕಡೆಗೆ Foreign students ನಮ್ಮ University ಗಳಿಗೆ ಬರಬೇಕು. ಆಗಲೇ ನಮ್ಮ education ಗೆ ಬೆಲೆ ಬರತಕ್ಕಂಥದ್ದು. ಈಗ ನಾವು ಬೆಂಗಳೂರಿನಲ್ಲಿ ಎಲ್ಲಾದರೂ ನೋಡಿದರೆ, ಬಹುಶಃ 10 ವರ್ಷದ ಕೆಳಗಡೆ ನಾವೂ ಯಾರೂ foreigners ಅನ್ನು ನೋಡುವುದಕ್ಕೆ ಆಗುತ್ತಿರಲಿಲ್ಲ. ಈಗ ಪ್ರತಿಯೊಂದು layout ನಲ್ಲಿ ಸಹ foriegners ಇದ್ದಾರೆ. ಕಾರಣವೇನೆಂದರೆ, ನಮ್ಮ IT ಇರಬಹುದು, BT ಇರಬಹುದು ಇಲ್ಲಿ ಕೆಲಸ ಮಾಡತಕ್ಕಂಥವರು ಇದ್ದಾರೆ. ಅದನ್ನು ನಾವು ಮೆಚ್ಚಬೇಕಾಗುತ್ತದೆ. ಎಲ್ಲಿ ಬೇಕಾದರೂ ನಾವು walking

ಮಾಡುವಾಗ ನಮ್ಮ ಜೊತೆಯಲ್ಲಿಯೇ ಇರುತ್ತಾರೆ. ಅದನ್ನು ನಾವು ಮೆಚ್ಚಬೇಕಾಗುತ್ತದೆ. ನಾಳೆ ದಿವಸ ನಿಮ್ಮ ಗಮನ ಏನು ಇರಬೇಕು ಎಂದರೆ, ನಾಳೆಯ ದಿವಸ foreign students ಇಲ್ಲಿಗೆ ಬಂದು education ತೆಗೆದುಕೊಂಡು ಹೋಗುವಂಥದ್ದು ಆಗಬೇಕು. ಈಗ ನಾವು Information Technology, Bio Technologyಯಲ್ಲಿ, Seed Technology ಯಲ್ಲಿ we are pioneers in the world, At least ನೀವು University ಗಳಲ್ಲಿ specialized courses ಮಾಡಿದಾಗ, Reseach and Development ಗೆ ನೀವು ಒತ್ತು ಕೊಡುವ ಸಂದರ್ಭದಲ್ಲಿ ಬೇರೆ ದೇಶದ ಮಕ್ಕಳು ಇಲ್ಲಿಗೆ ಬಂದಾಗ ನಿಮ್ಮ ಈ Education Private University PCP ಎಂದೆಲ್ಲ ಹೇಳುತ್ತೀರಲ್ಲ, ಅದಕ್ಕೆ ಬೆಲೆ ಬರತಕ್ಕಂಥದ್ದು ಆಗ. ಇವೆಲ್ಲ ಒಂದೇ ದಿವಸದಲ್ಲಿ ಪರಿವರ್ತನೆ ಆಗುತ್ತದೆ ಎಂದು, ಅಷ್ಟೊಂದು infrastructure ಬರುತ್ತದೆಂದು ನಾನು ಹೇಳಿಲ್ಲ. ಒಪ್ಪಿಕೊಳ್ಳುತ್ತೇನೆ. ಆದರೆ, ಅಷ್ಟೊಂದು infrastructure ಹಾಕತಕ್ಕಂಥ capacity ಇವತ್ತು ಖಾಸಗಿಯವರ ಕೈಯಲ್ಲಿ ಇರತಕ್ಕಂಥದ್ದು, ಅದು ಬರಬೇಕು. ಆ ರೀತಿಯಾಗಿ foreign students ಹೆಚ್ಚು ಬರಬೇಕು. ಎಲ್ಲೋ ಒಂದು ಕಡೆಗೆ ನಮಗೆ control ಇರಬೇಕು. ನೀವು ಇವತ್ತು Ph.D. ಗಳನ್ನು ಕೊಡುವ ಸಂದರ್ಭದಲ್ಲಿ ದಯಮಾಡಿ ರಾಜಕಾರಣಿಗಳಿಗೆ, ಸಿನಿಮಾದವರಿಗೆ ಅಥವಾ ಹಾದಿಬೀದಿಯಲ್ಲಿ ಹೋಗುವವರಿಗೆ ಕೊಡುವಂಥದ್ದು ಆಗಬಾರದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಅಲ್ಲ, ಅಲ್ಲ, ಕೊಡಬಾರದೆಂದಲ್ಲ. No., No., I am not telling that. ದಯಮಾಡಿ ನಾನು ಹೇಳುವುದೇನೆಂದರೆ, ಯಾರಾದರೂ ಕೂಡ Ph.D. ತೆಗೆದುಕೊಳ್ಳಬೇಕಾದರೆ ಅದಕ್ಕೆ ಏನಾದರೊಂದು ಮಾನದಂಡ ಇರಬೇಕು. Outstanding, ಈಗ ಡಾ: ರಾಜಕುಮಾರ್‌ರವರು service ಮಾಡಿದರು. Yes, he deserves. ವಿಷ್ಣುವರ್ಧನ್‌ರವರಿಗೆ ಕೊಟ್ಟರು. ಯಾವ University ಯವರಾಗಲಿ, ಅಂಥವರಿಗೆ ಕೊಡಿ. ಅದು ಬಿಟ್ಟು ಬೇರೆ ಯಾರಿಗೋ side actors ಗೆಲ್ಲ ಕೊಡುವುದಕ್ಕೆ ಹೋದರೆ ಏನಾಗುತ್ತದೆ? ಅದಕ್ಕೆ control ಏನಿದೆ? ದಯಮಾಡಿ ಹೇಳಿ.

ಶ್ರೀ ನೆ.ಲ. ನರೇಂದ್ರ ಬಾಬು : ಡಾಕ್ಟರೇಟ್ ಬಗ್ಗೆ ಹೇಳಿದರು. Vice Chancellor ಎಂದು ನನಗೆ ಯಾರೋ ಒಬ್ಬರು visiting card ಕೊಟ್ಟರು.

ಅಧ್ಯಕ್ಷರು : ಅದಕ್ಕೂ ಈ ಬಿಲ್‌ಗೂ ಏನು ಸಂಬಂಧ?

ಶ್ರೀ ನೆ.ಲ. ನರೇಂದ್ರ ಬಾಬು : Search Committee ಬಗ್ಗೆ ಅದರಲ್ಲಿ ಏನಾದರೂ clause ಇದೆಯೇ?

ಅಧ್ಯಕ್ಷರು : ವಿಷಯಾಂತರ ಬೇಡ.

ಶ್ರೀ ಸಿ.ಟಿ. ರವಿ : ತಾತ್ವಿಕವಾಗಿ ಮಾತ್ರ ಈ ಸದನ ಅನುಮೋದನೆಯನ್ನು ಕೊಡುತ್ತದೆ. ನಂತರ ಪುನಃ ಅವರು ಅರ್ಜಿ ಸಲ್ಲಿಸಬೇಕು, ಅದು ಪರಿಶೀಲನೆಯಾಗುತ್ತದೆ, ಸಂಬಂಧಪಟ್ಟ ಎಲ್ಲಾ ನಿಯಮಾವಳಿಗಳ ಪ್ರಕಾರ ಅವರು ವಿಶ್ವವಿದ್ಯಾಲಯವನ್ನು ಕಟ್ಟಬೇಕಾಗುತ್ತದೆ, ನಾವು guidelines ಏನು ಕೊಟ್ಟಿರುತ್ತೇವೆ, ಆ ನಿಯಮಾವಳಿಗಳ ಪ್ರಕಾರ. ಅದು ಉತ್ತಮ ಶಿಕ್ಷಣ ಸಂಸ್ಥೆಯನ್ನು ಕಟ್ಟದಿದ್ದರೆ ತಾನಾಗಿಯೇ ಮುಚ್ಚಿ ಹೋಗುತ್ತದೆ. ಎರಡನೆಯದಾಗಿ, ಕಲಂ 10 ರಲ್ಲಿ – ರಾಷ್ಟ್ರೀಯ ಸಂಸ್ಥೆಗಳಿಂದ ಅಧಿಮಾನ್ಯತಾ ಪಡೆಯುವ ಬಗ್ಗೆ ವಿವರಿಸಿದ್ದೇವೆ. ಅಜೀಂ ಪ್ರೇಮ್‌ಜಿಯವರ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದರು. ಅವರ ಆಶಯವನ್ನೂ ಗೌರವಿಸಿ ಶಿಕ್ಷಣ ಸಂಸ್ಥೆಯನ್ನು ಕೊಟ್ಟಿದ್ದೇವೆ. ಅಜೀಂ ಪ್ರೇಮ್‌ಜಿಯವರ ಮೇಲೆ ನಂಬಿಕೆಯನ್ನು ಇಟ್ಟಿದ್ದೆವು. ಏಕೆಂದರೆ, ಇದೊಂದೇ ಶಿಕ್ಷಣ ಸಂಸ್ಥೆ, ಬೇರೆ ಶಿಕ್ಷಣ ಸಂಸ್ಥೆ ಅವರ ಹತ್ತಿರ ಇರಲಿಲ್ಲ. ಆದರೆ, ಅವರು ಈಗ ನಾವು ಸಂಸ್ಥೆಯನ್ನು ಕಟ್ಟುತ್ತೇವೆನ್ನುವ ಆಶಯವನ್ನು ವ್ಯಕ್ತಪಡಿಸಿದರು. ಒಂದು ಶಿಕ್ಷಣ ಸಂಸ್ಥೆ ಈಗ ಇದ್ದ ಕಡೆಗೂ University ಮಾನ್ಯತೆ ಕೊಟ್ಟೆವು, ಅವರ ಆಶಯಕ್ಕೆ ಗೌರವವನ್ನು ಕೊಟ್ಟೆವು. ಹಾಗಾಗಿ, ಅವಕಾಶವನ್ನು ಕೊಡಬೇಕು, ತಪ್ಪಿದಾಗ ನಿಯಂತ್ರಿಸಬೇಕು, ಅವಕಾಶವನ್ನೇ ಕೊಡದೆ ನಿಯಂತ್ರಿಸುವುದು ಸರಿಯಾಗುವುದಿಲ್ಲ. ಅದಕ್ಕಾಗಿ ಆ ಚಿಂತನೆ ನಡೆಸಿ ಕಾಲು ಕಟ್ಟುವ ಕೆಲಸ ಮಾಡಿಲ್ಲ.

ಡಾ: ಹೆಚ್. ಸಿ. ಮಹದೇವಪ್ಪ : University ಕೊಡುವುದು it is not a.....

ಶ್ರೀ ಸಿ.ಟಿ. ರವಿ : ಈಗ ಮಣಿಪಾಲ ಕಾಲೇಜು, ದಯಾನಂದಸಾಗರ್ ಕಾಲೇಜು, ಎಂ.ಎಸ್. ರಾಮಯ್ಯ, BIT, ಇದರಲ್ಲಿ ಸಾವಿರಾರು ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ನಮಗೇನೋ trend ಬದಲಾಗಬೇಕು. ನಾವು ಕೇಳುತ್ತಿದ್ದೇವು. ಇತಿಹಾಸದ ಭಾರತದಲ್ಲಿ ನಳಂದ, ತಕ್ಷಶಿಲಾ, ಕಾಶಿ, ಕಂಚಿ ಇಲ್ಲಿಗೆ ವಿದೇಶಿ ವಿದ್ಯಾರ್ಥಿಗಳು ಬಂದು ಓದುತ್ತಿದ್ದರು ಎಂದು ಕೆಳುತ್ತಿದ್ದೆವು. ಆ revers trend ಬರಬೇಕೆನ್ನುವಂಥ ಆಶಯ ಇದೆ. ಹಾಗೆಂದು ನಾವು shopping complex ಗಳನ್ನು ತೆಗೆಯುವುದಕ್ಕೆ ಅವಕಾಶ ಕೊಟ್ಟಿಲ್ಲ. 25 ಎಕರೆ Compact land Banglaore ನಲ್ಲಿ ಎಂದರೆ ಕನಿಷ್ಠ

ಎಂದರೆ ಅವರಿಗೆ 250 ಕೋಟಿ ರೂಪಾಯಿಗಳು ಬೇಕು. ಹಾಗೆಯೇ outside ಬೆಂಗಳೂರು ಎಂದರೆ 100 ಕೋಟಿ ರೂಪಾಯಿಗಳಿಗಿಂತ ಕಡಿಮೆಗೆ ಜಾಗ ಸಿಗುವುದೇ ಇಲ್ಲ. ಅವರಿಗೆ Financial strength ಇರಬೇಕು, education strengthen ಮಾಡುವುದಕ್ಕೆ AICTE, MCI, UGC guidelines ನ್ನು follow ಮಾಡಬೇಕು. ಇವೆಲ್ಲವನ್ನೂ ಇಟ್ಟುಕೊಂಡು ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್ : ಸರ್ಕಾರದ ಮಟ್ಟದಲ್ಲಿ ಉನ್ನತ ಮಟ್ಟದ ಸಮಿತಿ ಮಾಡಿ. . . . .

(ಗೊಂದಲ)

ಅಧ್ಯಕ್ಷರು : Ph.D. ಕೊಡುವುದುಕ್ಕೆ ಇದಕ್ಕೆ ಬರುವುದಿಲ್ಲವಲ್ಲ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಚಿವರೆ, ನಾನು ಏನು ಆತಂಕ ವ್ಯಕ್ತಪಡಿಸಿದೆ ಎಂದರೆ, ದಾರಿಯಲ್ಲಿ ಹೋಗುವವರಿಗೆಲ್ಲ Ph.D. ಕೊಡಬಾರದೆಂದು ಹೇಳಿದೆ. ಅದಕ್ಕೆ ಯಾವ control ಇದೆ?

(ಗೊಂದಲ)

ಶ್ರೀ ಸಿ.ಟಿ. ರವಿ : ನಾಳೆಯ ದಿವಸ University Act ಗೆ ತಿದ್ದುಪಡಿ ಬಿಲ್ ಬರುತ್ತದೆ. ನಾವು Council ನಲ್ಲಿ ಆ ತಿದ್ದುಪಡಿ ಬಿಲ್‌ನಲ್ಲಿ Maximum 5ಕ್ಕೆ limit ಮಾಡಿದೇವೆ. ಯದ್ವತದ್ವಾ ಕೊಡಬಾರದೆಂದು ಸಲಹೆ ಬಂದಿದೆ, ನಾಳೆ ತಿದ್ದುಪಡಿ ತರುತ್ತೇವೆ.

ಅಧ್ಯಕ್ಷರು : ಆ University Bill ನಲ್ಲಿ ಬರುತ್ತದೆ. ಯಾವುದನ್ನು ಯಾವುದಕ್ಕೋ connect ಮಾಡಿದರೆ ಹೇಗೆ? Please, ಕುಳಿತುಕೊಳ್ಳಿ. Ph.D. ಗೂ ಈ ಬಿಲ್‌ಗೂ ಕನೆಕ್ಷನ್ನೇ ಇಲ್ಲ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್ : Search committee ಗೆ ವಹಿಸುವುದಕ್ಕೆ ಹೇಳಿ. ಆ ಕಮಿಟಿಯಲ್ಲಿ ಪಾಸ್ ಆದಮೇಲೆ ಕೊಡುವುದಕ್ಕೆ ಹೇಳಿ. ಇಲ್ಲದಿದ್ದರೆ ಯಾರ್ಯಾರಿಗೋ ಕೊಟ್ಟುಬಿಡುತ್ತಾರೆ.

ಅಧ್ಯಕ್ಷರು: ಆಯಿತು. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013 ನೇ ಸಾಲಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ 2 ರಿಂದ 61 ರವರೆಗೆ:–

ಅಧ್ಯಕ್ಷರು : 2 ರಿಂದ 61 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 61 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರ ರೂಪದಲ್ಲಿರುವ 2013 ನೇ ಸಾಲಿನ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಅಧ್ಯಕ್ಷರು :– ಈಗ ಪ್ರಶ್ನೋತ್ತರ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾಳೆ question hour ಇಲ್ಲ ಅಲ್ಲವೇ?

ಅಧ್ಯಕ್ಷರು :– ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಹಾಗಾದರೆ ನಾಳೆ ಇದೇ question hour ತೆಗೆದಿಕೊಳ್ಳಬಹುದಲ್ಲವೇ?